ಮಾಡಬಹುದು. ವೈನ್, ಸ್ಕಾಚ್, ಬಿಯರ್, ಫಿಶ್, ಚಿಕನ್ ಎಲ್ಲವೂ ಇದೆ...' ಧಾತುಸೇನ ಮಾತು ಕೊನೆಗೊಳಿಸುವ ಸೂಚನೆಯನ್ನು ನೀಡಿದ್ದರು. ನಾವು ಹೋಟೆಲ್‌ನಲ್ಲಿ ಊಟ ಮಾಡುವುದಾಗಿ ಹೇಳಿ ಹೊರಡಲು ಸಿದ್ಧರಾದೆವು. ತನ್ನೊಂದಿಗೆ ಚಹ ಕುಡಿಯಲು ಹೇಳಿದಾಗ ಮರುಮಾತನಾಡದೆ ಒಪ್ಪಿದ್ದೆವು. ಧಾತುಸೇನರ ಅನುಯಾಯಿ ಮಣ್ಣಿನ ಮಡಿಕೆಯಲ್ಲಿ ಹೊಗೆಯಾಡುವ ಚಹವನ್ನು ತಂದು ಕಪ್‌ಗಳಿಗೆ ಬಗ್ಗಿಸಿಕೊಟ್ಟಿದ್ದ. ಚಹ ಬಹಳ ರುಚಿಕರವಾಗಿತ್ತು. ಧಾತುಸೇನರಿಂದ ಬೀಳ್ಕೊಟ್ಟ ನಾವು ಹೋಟೆಲ್ ರೂಮು ಸೇರಿದಾಗ ಹತ್ತೂವರೆ ಗಂಟೆಯಾಗಿತ್ತು. ಮಳೆ ಸುರಿಯಲು ಪ್ರಾರಂಭವಾಗಿತ್ತು.

ನೀಲಾಂಜನ ಬಿಸಿ ನೀರಿನಲ್ಲಿ ಸ್ನಾನ ಮಾಡಿ ನೈಟ್ ಡ್ರೆಸ್‌ನಲ್ಲಿ ಕಂಗೊಳಿಸುತ್ತಿದ್ದಳು. ನಾನೂ ಕೂಡ ಬಿಸಿ ನೀರಿನಲ್ಲಿ ಸ್ನಾನ ಮಾಡಿದ್ದೆ. ಬಿಯರ್ ಕುಡಿಯಬೇಕೆಂದು ಕೊಂಡವನು ನೀಲಾಂಜನ ಸ್ಕಾಚ್ ಕುಡಿಯೋಣವೆಂದಾಗ ಒಪ್ಪಿಕೊಂಡಿದ್ದೆ. ಫಿಶ್ ಫ್ರೈ, ಚಪಾತಿ, ಚಿಕನ್ ಕಬಾಬ್, ಮಟನ್ ಮಸಾಲ ತಾನೇ ಇಂಟರ್ ಕಾಮ್‌ನಲ್ಲಿ ರೂಂ ಸರ್ವೀಸ್‌ಗೆ ಆರ್ಡರ್ ಮಾಡಿದ್ದಳು. ಕ್ಯಾಬಿನೆಟ್‌ನಿಂದ ಸ್ಕಾಚ್ ಬಾಟಲಿ ತೆಗೆದು, ಫ್ರಿಡ್ಜ್‌ನಿಂದ ಸೋಡಾ ಮತ್ತು ಮಿನರಲ್ ವಾಟರ್ ಬಾಟಲ್ ತೆಗೆದು ತಾನೇ ಎರಡು ಗ್ಲಾಸುಗಳಿಗೆ ಹದವಾಗಿ ಬೆರೆಸಿದ್ದಳು.

'ನನಗಿವತ್ತು ತುಂಬಾ ಖುಷಿಯಾಗುತ್ತಿದೆ. ಬರುವಾಗ ಧಾತುಸೇನರೊಂದಿಗೆ ಚಹ ಕುಡಿದ ಮೇಲಂತೂ ನನ್ನ ದೇಹ ಮತ್ತು ಮನಸ್ಸುಗಳು ಚೈತನ್ಯ ತುಂಬಿಕೊಂಡಂತೆ ಅನ್ನಿಸುತ್ತಿದೆ...' ನಾಲ್ಕು ಸಿಪ್ ವಿಸ್ಕಿ ಕುಡಿದು ಹೇಳಿದ್ದಳು ನೀಲಾಂಜನ. 'ನನ್ನಲ್ಲೂ ಅಂಥದ್ದೆ ಅನುಭವ ಆಗುತ್ತಿದೆ...' ವಿಸ್ಕಿಯನ್ನು ಗಂಟಲಲ್ಲಿ ಹರಿಸುತ್ತಾ ಹೇಳಿದ್ದೆ. ನನ್ನ ದೇಹ ಒಮ್ಮೆ ಬಿಗಿಯಾದಂತೆ, ಒಮ್ಮೆ ಸಡಿಲಗೊಂಡಂತೆ ಭಾಸವಾಗ ತೊಡಗಿತ್ತು.



'ನನ್ನ ಕೆಲಸ ಇಷ್ಟು ಬೇಗ ಆಗುತ್ತದೆಂದು ಭಾವಿಸಿರಲಿಲ್ಲ. ನನ್ನನ್ನು ದೆಹಲಿಯಿಂದ ಕರೆದುಕೊಂಡು ಬಂದದ್ದಕ್ಕೆ ತುಂಬಾ ಥ್ಯಾಂಕ್ಸ್...'

'ಥ್ಯಾಂಕ್ಸ್ ಹೇಳಬೇಕಾದದ್ದು ರಾಘವ ಪಂತುಲುಗೆ. ಪಂತುಲುಗೆ ಕ್ಯಾನ್ಸರ್ ಇರುವ ಬಗ್ಗೆ ನೀನು ಹೇಳಿದ್ದನ್ನು ನನಗೀಗಲೂ ನಂಬಲಿಕ್ಕೆ ಸಾಧ್ಯವಾಗುತ್ತಿಲ್ಲ...' 'ಹೌದು ರಾಘವ ಪಂತುಲು ಪ್ರತಿ ವರ್ಷವೂ ಲಂಡನ್‌ಗೆ ಹೋಗಿ ದೇಹದ ರಕ್ತವನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡು ಬರ್ತಾರೆ. ಅವರಿಗೆ ನಟ ನಾಗೇಶ್ವರ ರಾವ್ ಸಹ ಪರಿಚಿತರಾಗಿದ್ದರು. ಅವರಿಗೂ ಬ್ಲಡ್ ಕ್ಯಾನ್ಸರ್ ಇತ್ತು. ಒಂದೆರಡು